ಉತ್ತರ ಕನ್ನಡ ಜಿಲ್ಲೆಯಲ್ಲಿನ ಜೋಯಿಡಾದಲ್ಲಿ ರಕ್ತ ಪರೀಕ್ಷೆಗಾಗಿ ಕೆ.ಎಫ್.ಡಿ. ಘಟಕವನ್ನು ತೆರೆಯುವುದು

679 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡ ಜಿಲ್ಲೆಯ ಜೋಯಿಡಾದಲ್ಲಿ ಮಂಗನ ಕಾಯಿಲೆಯಿಂದ ಸತ್ತವರ ಸಂಖ್ಯೆ ಎಷ್ಟು? ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?*

ಆ) *ರಕ್ತ ಪರೀಕ್ಷೆಗಾಗಿ ಕೆ.ಎಫ್.ಡಿ. ಘಟಕವನ್ನು ಜೋಯಿಡಾದಲ್ಲಿ ಶಾಶ್ವತವಾಗಿ ಇಡಬೇಕೆಂದು ಅಲ್ಲಿನ ವೈದ್ಯಾಧಿಕಾರಿಗಳು ಜಿಲ್ಲಾ ಆರೋಗ್ಯಾಧಿಕಾರಿಯನ್ನು ಒತ್ತಾಯಿಸಿದ್ದು ನಿಜವೇ?*

ಇ) *ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ರಕ್ತ ಪರೀಕ್ಷೆಗಾಗಿ ಕೆ.ಎಫ್.ಡಿ. ಘಟಕ ತೆರೆಯಲು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು).*

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 1) ಉತ್ತರ ಕನ್ನಡ ಜಿಲ್ಲೆಯ ಜೋಯಿಡಾದಲ್ಲಿ ಮಂಗನ ಕಾಯಿಲೆಯಿಂದ ಸತ್ತವರು ಯಾರೂ ಇಲ್ಲ.

2) ಸಂಶಯಾಸ್ಪದ ಮಂಗನ ಕಾಯಿಲೆಗೆ ಒಳಪಟ್ಟ 35 ಜನರಿಗೆ ಶುಶ್ರೂಷೆ ಮಾಡಲಾಗಿದೆ.

3) ಸತ್ತ 4 ಜನರೂ ಮಂಗನ ಕಾಯಿಲೆ ಸೋಂಕಿನಿಂದ ಸತ್ತಿಲ್ಲವೆಂದು ದೃಢಪಟ್ಟಿದೆ.

ಜೋಯಿಡಾದಲ್ಲಿ ಮಂಗನ ಕಾಯಿಲೆ ನಿಯಂತ್ರಣಕ್ಕಾಗಿ ಇಲಾಖೆಯಿಂದ ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ

1) ಈ ಕಾಯಿಲೆ ಹರಡಿದ ವ್ಯಾಪ್ತಿಯಲ್ಲಿ ಮುಂಜಾಗ್ರತಾ ಕ್ರಮವಾಗಿ 1207 ಜನರಿಗೆ ಚುಚ್ಚುಮದ್ದು ಕೊಡಲಾಗಿದೆ. (ಕೆ.ಎಫ್.ಡಿ. ಚುಚ್ಚುಮದ್ದು).

2) ಕಾಡಿಗೆ ಹೋಗುವ ಜನರ ರಕ್ಷಣೆಗಾಗಿ ಮೈಗೆ ಹಚ್ಚಿಕೊಳ್ಳುವ "ಮೈಲಾಳ್" ಲೇಪನದ ಔಷಧವನ್ನು ಹಂಚಲಾಗಿದೆ.

3) ಮುಖ್ಯವಾಗಿ ಸಾರ್ವಜನಿಕರಿಗೆ ಆರೋಗ್ಯ ಶಿಕ್ಷಣ ಕೊಡಲಾಗಿದ್ದು, ಕರಪತ್ರ, ಭಿತ್ತಿಪತ್ರ ಹಂಚಿದ್ದು, ಚಲನಚಿತ್ರ ಪ್ರದರ್ಶನಗಳನ್ನು ಸಂಬಂಧಿಸಿದಂತೆ ತೋರಿಸಲಾಗಿದೆ.

4) ಇದಲ್ಲದೆ ಒಬ್ಬ ವೈದ್ಯಾಧಿಕಾರಿಯವರ ನೇತೃತ್ವದಲ್ಲಿ ಒಂದು ತಂಡವನ್ನು ನಿರ್ಮಿಸಿಕೊಂಡು ಅದರಲ್ಲಿ ಇಲಾಖಾ ಸಿಬ್ಬಂದಿಯವರನ್ನು ನೇಮಿಸಿದ್ದು ಸಮೀಕ್ಷೆ ಮಾಡಲು ನೇಮಿಸಲಾಗಿದೆ. ಹಾಗೂ ಸಾರ್ವಜನಿಕ ಆಸ್ಪತ್ರೆ, ದಾಂಡೇಲಿ ಮತ್ತು ಇತರೆ ಆರೋಗ್ಯ ಕೇಂದ್ರಗಳಲ್ಲಿ ಪ್ರತ್ಯೇಕವಾಗಿ ಈ ಕಾಯಿಲೆಯ ಜನರಿಗೆ ಸೂಕ್ತ ಚಿಕಿತ್ಸೆ ನೀಡಲು ಅವಕಾಶ ಮಾಡಿಕೊಡಲಾಗದೆ. ಮತ್ತು ಸಾಕಷ್ಟು ಔಷಧಿಗಳನ್ನು ದಾಸ್ತಾನು ಇಡಲಾಗಿದೆ.

ಆ) ನಿಜ.

ಇ) ಇಡೀ ರಾಜ್ಯದಲ್ಲೇ ಈ ಕಾಯಿಲೆಗೆ ಸಂಬಂಧಿಸಿದಂತೆ ವಿಶೇಷ ದುಬಾರಿ ರಕ್ತ ಪರೀಕ್ಷೆ ಘಟಕ ಶಿವಮೊಗ್ಗದಲ್ಲಿ ಇರುತ್ತದೆ. ಈ ಕಾಯಿಲೆಯು ವರ್ಷದಲ್ಲಿ 3-4 ತಿಂಗಳುಗಳಲ್ಲಿ ಕಾಣಿಸಿಕೊಳ್ಳುವುದರಿಂದ ಬೇರೆ ಬೇರೆ ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಸಂಗ್ರಹಿಸಿದ ರಕ್ತ ಮಾದರಿಗಳನ್ನು ಶಾಶ್ವತವಾಗಿರುವ ಶಿವಮೊಗ್ಗ ಕೇಂದ್ರಕ್ಕೆ ಕಳುಹಿಸಲಾಗುತ್ತಿದೆ.

ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಒದಗಿಸುವುದು

680 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಸಾರ್ವಜನಿಕ ಗ್ರಂಥಾಲಯಗಳಿಗೆ ಪ್ರತಿ ವರ್ಷ ಎಷ್ಟು ಪುಸ್ತಕಗಳನ್ನು ಕೊಂಡುಕೊಳ್ಳಲಾಗುತ್ತಿದೆ?*

2) *ಕರ್ನಾಟಕ ರಾಜ್ಯದಲ್ಲಿ ಇರುವ ಸಾರ್ವಜನಿಕ ಗ್ರಂಥಾಲಯ ಸಂಖ್ಯೆ ಎಷ್ಟು? (ಅವು ಎಲ್ಲೆಲ್ಲಿ ಇವ ವಿವರ ನೀಡುವುದು).*

3) *ಯಾವ ಯಾವ ಭಾಷೆಯ ಪುಸ್ತಕಗಳನ್ನು ಖರೀದಿಸಲಾಗುತ್ತಿದೆ?*

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಹಾಗೂ ಗ್ರಂಥಾಲಯ ರಾಜ್ಯ ಸಚಿವರು) :

1) ಸರಾಸರಿ ವರ್ಷಕ್ಕೆ 4,02,662 ಪುಸ್ತಕಗಳು.

2) 2181. (ಪಟ್ಟಿ ಲಗತ್ತಿಸಿದೆ).

3) ಕನ್ನಡ, ಆಂಗ್ಲ, ಹಿಂದಿ, ತೆಲುಗು, ತಮಿಳು, ಉರ್ದು ಮತ್ತು ಮರಾಠಿ ಪುಸ್ತಕಗಳನ್ನು ಖರೀದಿಸಲಾಗುತ್ತಿದೆ.